


International Journal of Kannada Research
www.kannadajournal.com

ISSN: 2454–5813
IJKR 2022; 8(1): 110-112
© 2022 IJKR
www.kannadajournal.com
Received: 24-11-2021
Accepted: 26-12-2021

**ಪ್ರಕಾಶ್ ಡಿ ಮೆಳವಂಕಿ**
ಹುಡುಕಾಟ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ

**Corresponding Author:**
**ಪ್ರಕಾಶ್ ಡಿ ಮೆಳವಂಕಿ**
ಹುಡುಕಾಟ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ

# "ಶರಣ ಮಡಿವಾಳ ಮಾಚಿದೇವ": ಒಂದು ವಿವೇಚನೆ

## ಪ್ರಕಾಶ್ ಡಿ ಮೆಳವಂಕಿ

**ಪರಿಚಯ**

ಕಲ್ಯಾಣದ ಶರಣರಲ್ಲಿ ಸತ್ಯ ಶುದ್ಧ ಕಾಯಕ ನಿಷ್ಠ ಮಾಹೇಶ್ವರ ನಿಲುವಿಗೆ ಶರಣ ಮಡಿವಾಳ ಮಾಚಿ ದೇವನ ಹೆಸರು ಪ್ರಾತ:ಸ್ಮರಣೀಯವಾಗಿದೆ. ಬಸವಣ್ಣನ ವಚನಗಳಲ್ಲಿ ಇತನ ಸ್ತುತಿ ಇದೆ. ಪಾಲ್ಕುರಿಕೆಯ ಸೋಮನಾಥನ ಬಸವಪುರಾಣದಲ್ಲಿ ಮಾಚಿದೇವನ ಬಗೆಗೆ ಪವಾಡರೂಪದ ಪ್ರಸಂಗಗಳ ಉಲ್ಲೇಖವಿದೆ. ಮಾಚಿದೇವನ ಬದುಕಿನ ಕೆಲವು ಸಂಗತಿಗಳನ್ನು ಬಸವ ಪುರಾಣವೇ ಮೊದಲು ತಿಳಿಸುವದು. ಅಪಾರ ನಿಷ್ಠೆ ಮತ್ತು ಸ್ವಾಭಿಮಾನದ ಪ್ರತೀಕವಾಗಿ ಶರಣ ಮಾಚಿದೇವನು ಕಾಣಿಸಿಕೊಳ್ಳುತ್ತಾನೆ. ಸದ್ಯ ದೊರಕುವ ಮಟ್ಟಿಗೆ ೩೫೩ ವಚನಗಳನ್ನು ಮಾಚಿ ದೇವನ ಹೆಸರಿನಲ್ಲಿ ಸಂಕಲಿಸಿರುವದು ಕಂಡು ಬರುವದು. (ಸಂಕೀರ್ಣ ವಚನ ಸಂಪುಟ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರ) ಕಲಿದೇವರ ದೇವ ಎಂಬುದು ಮಾಚಿದೇವನ ಅಂಕಿತವಾಗಿದೆ. ಕಲಿದೇವರು ಎಂಬ ಶಬ್ದದ ಅರ್ಥವ್ಯಾಪ್ತಿಯು ವೀರದ್ಯೋತಕವಾದುದು. ಅದೇ ರೀತಿ ಮಾಚಿದೇವನ ವ್ಯಕ್ತಿತ್ವವು ವೀರತನಕ್ಕೆ ಸಂಬಂಧಿಸಿದದು ಆಗಿದೆ. ಪೌರಾಣಿಕವಾಗಿ ಆತನು ವೀರಭದ್ರನ ಅವತಾರವೇ ಎಂಬುದು ವೀರತನವನ್ನು ಧ್ವನಿಸುತ್ತದೆ.

**ಬದುಕು**

ಮಡಿವಾಳ ಮಾಚಿದೇವನ ಊರು ಹಿಪ್ಪರಿಕೆ. ಅದು ದೇವರ ಹಿಪ್ಪರಿಗೆ ಎಂದು ಈಗ ಪರಿಚಿತವಾದ ಊರು. ಆ ಊರ ಹೊರ ವಲಯದಲ್ಲಿ ಇಂದಿಗೂ ಒಂದು ವಿಶಾಲವಾದ ಗದ್ದಿಗೆ, ಗುಡಿಗಳು ಮಾಚಿದೇವನವೇ ಎಂದು ಹೇಳಲಾಗುತ್ತದೆ. ಕಲ್ಯಾಣದ ಶರಣರ ಆಕರ್ಷಣೆಯು ಈತನನ್ನು ಕಲ್ಯಾಣಕ್ಕೆ ಕರೆದುತಂದಿತು. ಅಲ್ಲಿ ಶರಣರ ವಸ್ತ್ರಗಳನ್ನು ಮಡಿ ಮಾಡುವ ಕಾಯಕದಲ್ಲಿದ್ದನು. ಬಸವಣ್ಣನ, 'ಉರಭಕ್ತಿವಾರ್ದಿಎದ್ದುದೆಸೆದೆಸೆಗೆ' ಪಸರಿಸಿದಾಗ ಮಾಚಿದೇವನು ಅಂತಹ ಭಕ್ತಿಗೆ ಮೆಚ್ಚಿ ಜಂಗಮಾಸಕ್ತನಾಗಿ ಜಂಗಮಕೋಟಿಯ ಅರ್ಚನೆಯಕೈಂಕರ್ಯನಾಗಿ ಹೊಂದಿ, ಶರಣನಾಗಿ ಕಲ್ಯಾಣದಲ್ಲಿ ಮಾಚಿದೇವನು ಬದುಕಿದನು. ಮೊದಲು ಸಾಮಾನ್ಯನಾದ ಮಡಿವಾಳನಾಗಿದ್ದಾಗ ಅವರಿವರ ಬಟ್ಟೆಗಳನ್ನು ಸ್ವಚ್ಛ ಮಾಡುವದು 'ತನ್ನ ಕೈ ತೀಡೆತೀರದು' ಎಂದು ಶರಣರ ಬಟ್ಟೆಗಳನ್ನು 'ಬೆಳಗು ಜಾವದೊಳಿದು ಬೆರೊಂದು ರೇವು ಸೃಷ್ಟಿಸಿ ಹೊಗೆಯುತಿರ್ದ' ಹೀಗೆ ಶರಣರ ಬಟ್ಟೆಗಳನ್ನು ಮಡಿಮಾಡುವ ಮಹಾ ಭಕ್ತನಾಗಿದ್ದನು. ಕಲ್ಯಾಣದಲ್ಲಿ ಇಂದಿಗೂ ವಿಶಾಲವಾದ ತ್ರಿಪುರಾಂತಕಕರೆಯ ಕೆಳಗೆ. ಒಂದು ನೀರಿನ ಊತೆಇದ್ದು ಅದಕ್ಕೊಂದು ಷಟ್ಕೋನಾಕಾರದ ಕಲ್ಲುಕಟ್ಟಡವು ಇದೆ. ಅಲ್ಲಿ ಶರಣರ ಬಟ್ಟೆಗಳನ್ನು ಮಡಿಗೊಳಿಸುತ್ತಿದ್ದ. ಇದನ್ನು ರೇವು ಎಂದುಕರೆಯುವರು. ಅನತಿದೂರದಲ್ಲಿ ಶರಣರಿಗೆ ಸಂಬಂಧಿಸಿದ ಅನೇಕ ಅವಶೇಷ ಕಟ್ಟಡಗಳು ಇವೆ.

**ಮಾಹೇಶ್ವರಸ್ಥಿತಿ–ಗಣಾಚಾರ ಪ್ರವೃತ್ತಿ** :– 'ಭವಿಗಳ ಬಟ್ಟೆಗಳನ್ನು ಹೊಗೆಯೆ ಭಕ್ತರ ಬಟ್ಟೆಗಳನ್ನು ಮುಟ್ಟಲಿಯೆ ! ಎಂಬ ನಿಲುವಿನಿಂದ ಮಾಚಿದೇವನ ಶರಣಕಾಯಕದ ನಿಷ್ಠೆ ವೇದ್ಯವಾಗುವದು. ಆ ಕುರಿತು ಒಂದು ಪ್ರಸಂಗವನ್ನು ಬಸವ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಮಾಚಿದೇವನ ಬಗೆಗೆ ಭಕ್ತರು ಬಂದು ಬಸವಣ್ಣನಲ್ಲಿ ಹೇಳುತ್ತಾರೆ. ಅದನ್ನೆಲ್ಲಾ ಕೇಳಿದ ಬಸವಣ್ಣ ಮಾಚಿದೇವನ ವಿಲಸಿತ ಭಕ್ತಿಯ.ರೀತಿಯನ್ನು ಮೆಚ್ಚಿಕೊಂಡುಇಂತಹ ಸಾಮರ್ಥ್ಯ, ಸದ್ಭಕ್ತಿ, ನಿಷ್ಠೆ ಬೇರೆಕಡೆಗೆಇಲ್ಲ. ಆದರೆಆತಏಕಾಂಗಿಯಾಗಿ ಬದುಕುವದುಯೋಗ್ಯವಲ್ಲ ಎಂದು ತಿಳಿಸುವನು. ಅನತಿಕಾಲದಲ್ಲಿಯೆ. ಒಮ್ಮೆ ಬಿಜ್ಜಳನ ಆಸ್ತಾನದಲ್ಲಿ ಬಸವಣ್ಣನವರು ಇರುವಾಗ ಅವರಿವರೆನ್ನದೆ ಹಲವರು ಬಂದು ಮಾಚಿದೇವನ

ಬಗೆಗೆ ಒಂದುದೂರು ನೀಡಿದರು. ಮಾಚಿದೇವನು 'ಭಕ್ತರ ಮಡಿ ಅರಿವೆಗಳನ್ನು ತರುವಾಗ ಭವಿಗಳು ಯಾರು ಅಡ್ಡ ಬರಬಾರದು ಎಂದು ಘಂಟೆ ಬಾರಿಸುತ್ತಾ ಬರುತ್ತಾನೆ. ಮನುಷ್ಯರಿರಲಿ ಆನೆ ಬಂಡಿ ಮೊದಲಾದವು ಅಡ್ಡ ಬಂದರೂ ಅವುಗಳನ್ನು ನಾಶ ಮಾಡಿ ಮುಂದೆ ಹೋಗುತ್ತಾನೆ. ಮೊನ್ನೆ ಅರಿಯಲಾರದವನೊಬ್ಬ ಮಾಚಿದೇವನ ಮುಂದೆ ಅಡ್ಡ ಬಂದ. ಮಾಚಿದೇವನು ಅವನನ್ನು ಹೊಡೆದು ಆಕಾಶಕ್ಕೆ ತೂರಿದ ಅವನ ಶರೀರವು ಆಕಾಶದಲ್ಲೆ ಮಾಯವಾಯಿತು. ಆ ಶವವನ್ನು ಅವನೆ ತಿಂದನೇನೋ? !! – ಎಂದು ಬಿಜ್ಜಳನಿಗೆ ದೂರು ನೀಡಿದರು. ಅರಸನು ಬಸವಣ್ಣನನ್ನು ಉದ್ದೇಶಿಸಿ 'ಏನಿದು ವಿಚಿತ್ರ ಅರಿವೆಗಳನ್ನ ಮುಟ್ಟಲು ಅವೇನು ಹರಿಯುವವೇ? ಊರಿನಲ್ಲಿ ಬೇರೆಯವರು ಬದುಕಬಾರದೆ? ಯಾವನೊಬ್ಬ ಮಡಿವಾಳ ಇಷ್ಟು ಉದ್ಧಟನಾದನೆ? ಯಾರನ್ನೆಕೊಮದನಂತೆ. ಈಗ ಸಾಕ್ಷಿಗಾಗಿ ಆ ಶವವು ಇಲ್ಲ. ಆ ಅಗಸನು ರಾಕ್ಷಸ ಇರಬೇಕು. ಧರ್ಮ ಅರಿಯದ ಭಕ್ತ' ! ಎಂಬ ಬಿಜ್ಜಳನ ಮಾತಿಗೆ 'ಈ ವಿಷಯದ ಪೂರ್ವಾಪರ ವಿಚಾರ ಮಾಡಿತಪ್ಪಿದ್ದರೆ ಶಿಕ್ಷೆಯಾಗಲಿ ಸುಮ್ಮನೆ ಅಗಸ, ಅಗಸನೆಂದು ಕುಲವಿಟ್ಟು ಮಾತಾಡಬೇಡಿ. ದೇವತೆಗಳುಕೂಡ ಧರ್ಮಕ್ಕಾಗೆ ಕೊಂದಿದ್ದಾರೆ ತಮ್ಮ ಕ್ಷತ್ರಿಯಧರ್ಮ ಕೊಲ್ಲುವದೇ, ಬಟ್ಟೆ ಮುಟ್ಟಿದ ಮಾತ್ರಕ್ಕೆ ಕೊಲ್ಲಲು ಕಾರಣವೇ? ಇನ್ನೂ ಏನೋ ಕಾರಣವಿರಬೇಕು ನೋಡೋಣ'. ಎಂದು ಹೇಳಿದರು ಬಸವಣ್ಣನ ಮಾತಿಗೆ ಸೊಪ್ಪು ಹಾಕದೆ ಬಿಜ್ಜಳನು ಆನೆ ಮಾವುತರನ್ನು ಕರೆಯಿಸಿ ಆ ಅಗಸನಿಗೆ ಅಡ್ಡ ಬನ್ನಿ ಎಂದು ಕಳಿಸಿದ. ಹಾಗೆ ಅಡ್ಡ ಬಂದ ಆನೆಯನ್ನು ಮಾಚಿದೇವನುಕೊಂದು ಆಕಾಶಕ್ಕೆ ಅಟ್ಟಿದ. ಅಷ್ಟು ಅಲ್ಲದೇ ಅರಸನ ಕೆಲಸವನ್ನರಿತು 'ಆತನ ಕೊಬ್ಬುಅಡಗಿಸುವೆ' ಎಂದು ಹೇಳಿಕೊಂಡ. ಕೊನೆಗೆ ಬಸವಣ್ಣನೇ ಬಿಜ್ಜಳನಿಗೆ ಮಾಚಿದೇವನ ಸಾತ್ವಿಕತೆಯ ಬಗೆಗೆ ತಿಳಿಹೇಳಿದಾಗ ಬಿಜ್ಜಳನು ಸಾಷ್ಟಾಂಗ ಹೇಳಿ ಕ್ಷಮೆ ಕೇಳಿದನಂತೆ. ಈ ಘಟನೆಯ ಹಿನ್ನೆಲೆಯಲ್ಲಿ ಮಾಚಿದೇವನ ಶರಣನಿಷ್ಠೆ ಮಾಹೇಶ್ವರ ಸ್ಥಿತಿ : ಮತ್ತು ಗಣಾಚಾರ ಪ್ರವೃತ್ತಿಯನ್ನು ಕಾಣಬಹುದು.

ಬಸವ ಪುರಾಣದಲ್ಲಿ ಉಲ್ಲೇಖಗೊಂಡ ಇನ್ನೊಂದು ಪ್ರಸಂಗವು. ಬಸವಣ್ಣನೇ ತಿದ್ದಿ ನೇರ್ಪು ಗೊಳಿಸುವಂತಾದ್ದಾಗಿದೆ. ಬಸವಣ್ಣನು ಬೇಡಿದವರಿಗೆ ಬೇಡಿದ್ದನ್ನು ಈಯಿವೆ ಎಂಬ ವಚನವನ್ನು ಭಕ್ತರು ಮಾಚಿದೇವನ ಮುಂದೆ ಅಂದು ಹಾಡಿ ತೋರಿಸುತ್ತಾರೆ. ಇದರಿಂದ ಸಿಟ್ಟಾದ ಮಾಚಿದೇವ – 'ಏನು ಭಕ್ತರೆಲ್ಲರನು ದೀನರನ್ನಾಗಿ ಮಾಡಿ ತಾನೊಬ್ಬನೆ ಕೊಡುವವನಾಗಿ ಸೊಕ್ಕಿನಿಂದ ಮೆರೆಯುತ್ತಾನೆಯೆ? ನನ್ನ ಮುಂದೆ ಇಂತಹ ಸೊಕ್ಕಿನ ಹಾಡನ್ನು ಹಾಡದಿರಿ'. ಎಂದು ಸಾತ್ವಿಕಕೋಪವನ್ನು ಪ್ರಕಟಗೊಳಿಸುತ್ತಾನೆ ಇದನ್ನರಿತ ಬಸವಣ್ಣ ಇನ್ನು ಮುಂದೆ ಅಂತಹ ಸೊಕ್ಕಿನ ವಚನಗಳನ್ನು ಬರೆಯಲಾರೆ ಎಂದ. ಆಗ ಮಾಚಿದೇವನು 'ಬಸವಣ್ಣ ನೀನೊಬ್ಬನೇ ಆರ್ಥಕ್ಕೆ ಅಧಿಪತೆಯೆ ಆ ಭಕ್ತರೆಲ್ಲಾ ಅಧಮರಾಗಿ ಬೇಡ ಬೇಕೆ ನೀನು ಕೊಡುವದು ವಸ್ತು ವಡವೆ ಮೊದಲಾದ ಲೌಕಿಕವನ್ನು ನನ್ನಜಂಗಮ ಬಡತನದ್ದಲ್ಲ' !ಎಂದು ಹೇಳಿ ಇಲ್ಲಿ ಒಂದು ವಿಚಿತ್ರವನ್ನು ನೋಡು ಎಂದು ಮಡಿ ಅರಿವೆಯನ್ನೆ ಜಾಡಿಸಿದಾಗ ವಜ್ರ ವೈಡೂರ್ಯಗಳು ಉದರಿದವು. ಈ ಪ್ರಸಂಗವು ಬಸವಣ್ಣನ ಅಹಂಕಾರದ ಅಂಕುರವನ್ನು ದೂರ ಮಾಡಿದ ಪ್ರಸಂಗವಾಗಿದೆ. ಮಾಚಿದೇವನು ಕಲ್ಯಾಣ ಕ್ರಾಂತಿಯವರೆಗೆ ಇದೇ ಸತ್ಕಾರ್ಯದಲ್ಲಿ ಲೀನವಾಗಿದ್ದ.

ಶೂನ್ಯ ಸಂಪಾದನೆಗಳಲ್ಲಿ ನುಲಿಯ ಚಂದಯ್ಯನ ಪ್ರಸಂಗದಲ್ಲಿ ಮಾಚಿದೇವನ ಪ್ರಸ್ತಾಪ ಬರುತ್ತದೆ. ನೀರೊಳಗೆ ಜಾರಿ ಬಿದ್ದ ಇಷ್ಟಲಿಂಗವನು ಕಟ್ಟಿಕೊಳ್ಳಬೇಕೆಂದು ಮಾಚಿದೇವನು ಒತ್ತಾಯಿಸುತ್ತಾನೆ. ಚಂದಯ್ಯನನ್ನು ಅನುಭವ ಮಂಟಪಕ್ಕೂಕರೆದೊಯ್ಯುತ್ತಾನೆ. ಬಹು ಕುತೂಹಲಕಾರಿಯಾದ ಈ ಪ್ರಸಂಗದಲ್ಲಿ ಮಾಚಿದೇವನ ಧರ್ಮನಿಷ್ಠೆ ವ್ಯಕ್ತವಾಗುವದು. ಕ್ರಾಂತಿಯಕಡೆಯ ದಿನಗಳಲ್ಲಿ ಮಾಚಿದೇವನು ವೀರ ವೃತ್ತಿಗೆ ಮರಳಿದಂತೆ ಕಾಣುತ್ತದೆ.

**ಸಾಹಿತ್ಯ**

ಮಾಚಿದೇವನು ಕಲಿ ದೇವರದೇವ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಅಚ್ಚರಿಯ ವಿಷಯವೆಂದರೆ ವಚನ ಸಾಹಿತ್ಯದ ಆರಂಭದ ಸ್ವರೂಪವನ್ನು ಈ ವಚನಗಳು ಎತ್ತಿತೋರುತ್ತವೆ. ವಚನದ ಮೊದಲನೆಯ ಹಂತವೇ ಜನಪದ ಕಾವ್ಯ ರೂಪಗಳನ್ನು ಬಳಸಿಕೊಳ್ಳುವದು. ಈ ನಿಟ್ಟಿನಲ್ಲಿ ಆದ್ಯ ವಚನಕಾರ ಜೇಡರ ದಾಸಿಮಯ್ಯನಂತೆಯೆ ಮಡಿವಾಳ ಮಾಚಿದೇವನು ತ್ರಿಪದಿ, ಏಳೆ, ಸಾಂಗತ್ಯದಂತಹ ರೂಪಗಳನ್ನು ಕಲಿದೇವಯ್ಯ ಎಂಬ ಅಂಕಿತದೊಡನೆ ರಚಿಸಿದ್ದಾನೆ.

**ತ್ರಿಪದಿಗಳು**

'ಎಲ್ಲೆಡೆ ಪ್ರಾಣಿಯ ಕೊಲ್ಲುದಿಹುದೆ ಧರ್ಮ
ಒಲ್ಲದಿಪ್ಪುದೇ ತಪ, ಪರವಧು ವಿನಾಶೆ
ಇಲ್ಲ ದಿರ್ಪದವನೆ ತಾನು ಕಲಿದೇವಯ್ಯ

ಒಡ್ಡಿರ್ದ ಮಣ್ಣಿಗೂ ನಂಟ್ಟಿರ್ದ ಕಲ್ಲಿಗೂ
ಕಟ್ಟಿರ್ದ ಲಿಂಗ ಅಡಿಯಾಗಿ ಬೀಳುವ
ಲೊಟ್ಟಿ ಗುಡಿ ಹಿಗಳನೇನೆಂಬೆ ಕಲಿದೇವಯ್ಯ

**ಏಳೆ**

ಹಿಡಿದ ಲಿಂಗವ ಬಿಟ್ಟು ಗುಡಿಯ ಲಿಂಗಕೆ ಶರಣೆಂಬ
ಇಡಿಗಳನ್ನು ಏನಂಬೆನಯ್ಯ ಕಲಿದೇವಾ

**ಸಾಂಗತ್ಯ**

ಶ್ವಾನ ಮುಟ್ಟಿದೆಂಜಲ ಮಾನವರು ಕೆಳ್ವರು
ಶ್ವಾನ ನಿಂಕರಕಷ್ಟ ಸುರದೈವವೆಂಜಲ
ಆನಂದ ಲಿಂಗಕೆ ತೋರಿ ಭುಂಜಿಸುವಾಗೆ
ಶ್ವಾನ ಸೂಕರ ಗಂಗೆಯಿಂದತೆರ ಕಲಿದೇವರದೇವಾ

ಸತ್ಯರು ನಿತ್ಯರು ಮುಕ್ತರೆಂದೆನುತ
ಅರ್ತಿಗೊಳ್ಳುತ್ತನುಡಿವರು ಭಕ್ತಿ ಸದಾಚಾರ
ವರ್ತನೆಯ ಸತ್ಯರು ಹೇಳ ಹೋದಡೆ
ನಮಗೆ ತಿರುವದೆ ಸಂಸಾರಗಳಿಗೆಂಬ
ವ್ಯರ್ಥರನೇನೆಂಬೆನಯ್ಯಾ ಕಲಿದೇವರದೇವಾ

ಇವೆಲ್ಲವು ದೇಶಿ ಛಂದೋರೂಪದಲ್ಲಿ ಪ್ರಖ್ಯಾತವಾದವುಗಳಾಗಿವೆ. ವಚನ ಸಾಹಿತ್ಯದ ಹುಟ್ಟನ್ನು, ಸ್ವರೂಪವನ್ನು ತಿಳಿವಾಗ ತುಂಬಾ ಉಪಯುಕ್ತ ಆಧಾರವಾಗಿವೆ. ಇನ್ನೂ ಅರ್ಥದ ದೃಷ್ಟಿಯಿಂದ ಇವೆ ವಚನಗಳು ದಯೆ,–ಇಷ್ಟಲಿಂಗ ನಿಷ್ಠೆ, ಸಾತ್ವಿಕತೆ ಇವುಗಳನ್ನು ಮೌಲ್ಯಗಳಾಗಿ ಅಭಿವ್ಯಕ್ತ ಮಾಡುವದನ್ನುಕಾಣುತ್ತೇವೆ. ಸ್ವಚ್ಛಂದರೂಪದ ವಚನಗಳನ್ನು ಮಾಚಿದೇವನು ರಚಿಸಿದನು. ವಚನಗಳು ಭಕ್ತಿ ಅನುಭಾವದಂತೆ ತತ್ವ ದರ್ಶನಗಳನ್ನು ಅಭಿವ್ಯಕ್ತಿಗೊಳಿಸುವದು ಮಾಚಿದೇವನ ವಿಶೇಷತೆಯಾಗಿದೆ. ಜಂಗಮ ಎಂಬುದನ್ನು ಅರಿವಿನ ಚೈತನ್ಯವೆಂದು ನಿರೂಪಿಸಿದ್ದಾನೆ. ಆತನ ಒಂದು ಪ್ರಸಿದ್ಧ ವಚನ ಇಂತಿದೆ–

‘ಹೋದ ದಿವಸ ವಿಷವೆಂದರಿವುದು ಮನದಲ್ಲಿ :
ಬರುವ ದಿವಸ ಸುಧಾಸಮವೆಂದರಿಸುವುದು ಸದ್ಭಾವದಲ್ಲಿ
ಹೋದಂತೆ ಹೋದರೆಕಲಿದೇವರ ಕಾಂಬಪರಿಯಂತೊ

ಮಾಚಿದೇವನು ಈ ವಚನದಲ್ಲಿ ಭೂತ ಮತ್ತು ಭವಿಷತ್ ಪ್ರಶ್ನೆಗ್ಗಳನ್ನು ವಿವೇಚಿಸುತ್ತಾ ವರ್ತಮಾನ ಪ್ರಶ್ನೆಯು ಬಹು ಮುಖ್ಯವೆಂಬುದನ್ನು ಸೂಚಿಸುತ್ತಾನೆ. ಗತಕಾಲವನ್ನು ಚಿಂತಾ ಭಾವದಿಂದ ನೋಡದೆ ಚಿಂತನೆ ಭಾವದಿಂದ ನೋಡಿ ಮರೆತು ಬರುವ ಭವಿಷತ್ ಕಾಲವನ್ನು ಚಿಂತನಾತ್ಮಕವಾಗಿ ಅರಿಯಬೇಕೆಂದು ತಿಳಿಸುತ್ತಾ ವ್ಯರ್ಥವಾಗಿ ಬದುಕುವದರಲ್ಲಿ ಅರ್ಥವಿಲ್ಲವೆಂದು ತಿಳಿಸುವ ಮಾತು ಮಹತ್ವದ್ದಾಗಿದೆ. ಬದುಕುಒಂದು ವ್ಯರ್ಥಕ್ರಿಯೆಯಾಗಬಾರದು. ಜನನ–ಮರಣದ ಮಧ್ಯದ ಕಾಲಾಂತರವು ಏನೂ ಉಳಿಯದಂತಾದರೆ ಅಸ್ಥಿತ್ವಕ್ಕೆ ಅರ್ಥ ಉಳಿಯುವದಿಲ್ಲ. ಅಸ್ಥಿತ್ವದ ಅರ್ಥವನ್ನು ಅರಿಯಲು ಏನಾದರೂ ಉಳಿವಂತೆ ಬದುಕಬೇಕು ಆಗ ಬಾಹ್ಯ ಅನುಭವಗಳ ಇಂದ್ರಿಯಗಳ ವಿಷಯಗಳನ್ನು ತಾತ್ವಿಕ ಮತ್ತು ದಾರ್ಶನಿಕ ಶಕ್ತಿಯಲ್ಲಿ ಹೊಂದಿಸಿಕೊಳ್ಳಬೇಕೆಂದು ಮಾಚಿದೇವ ತಿಳಿಸುತ್ತಾನೆ.

"ಶಬ್ದ–ಗುರು, ಸ್ಪರ್ಶ–ಲಿಂಗ, ರೂಪು–ಜಂಗಮ,
ರಸ–ಪ್ರಸಾದ, ಗಂಧ–ಅನುಭಾವ–"

ಎಂಬ ಈ ವಚನದ ಸಾಲುಗಳು ಇಂದ್ರೀಯ ವಿಷಯಗಳಾದ ರೂಪ, ರಸ, ಗಂಧ, ಸ್ಪರ್ಶ ಶಬ್ದ ಇವು ಗುರು–ಲಿಂಗ–ಜಂಗಮ–ಪ್ರಸಾದ–ಅನುಭಾವಗಳಾಗಿ ಅನುಭೂತಿಯನ್ನು ಪಡೆಯಬೇಕೆಂದು ಮಾಚಿದೇವ ದಾರ್ಶನಿಕವಾಗಿ ವಿವರಿಸುತ್ತಾನೆ ಅಲ್ಲದೇ

"ಕಾಮ–ಪೂಜೆ, ಕ್ರೋಧ–ಅನಿಮಿಷ,
ಲೋಭ–ಭಕ್ತಿ, ಮೋಹ–ಅಷ್ಠವಿಧಾರ್ಚನೆ
ಮದ–ಶೋಡಸೋಪಚಾರ, ಮತ್ಸರ–ಭವನಾಸ್ತಿ"

ಎಂದು ಮನಸ್ಸಿನ ವಿಷಯಗಳಾದ ಅರಿಷಡ್ವರ್ಗಗಳನ್ನು ತಿರುಗಿಸಿ ಪರಿವರ್ತಿಸಲು ತಿಳಿಸಿದ್ದಾನೆ.
ಮಾಚಿದೇವನ ವಚನಗಳು ವ್ಯಕ್ತಿಯ ಜೀವನ ಮತ್ತು ಸಾಧನೆಗಳಲ್ಲಿ ಅರಿವು, ನಿಷ್ಠತೆ, ಶುದ್ದಿಗಳನ್ನು ಎತ್ತಿ ಹೇಳುತ್ತವೆ. ಕಲ್ಯಾಣದ ಶರಣರ ಆಂದೋಲನದಲ್ಲಿ ಆತನ ಹೆಸರು ಚಿರಸ್ಥಾಯಿಯಾಗಿದೆ.

**ಆಧಾರ ಗ್ರಂಥಗಳು :**

೧) ಸಂಕೀರ್ಣ ವಚನಗಳು ಸಂಪುಟ ೩ ಕರ್ನಾಟಕ ಸರಕಾರ
೨) ‘ಬಸವ ಪುರಾಣ’ ಪಾಲ್ಕುರಿಕೆಯ ಸೋಮನಾಥ ಅನುವಾದ ಬಿ.ವಿ.ನಾರಾಯಣ
೩) ‘ಶಿವತತ್ವ ಚಿಂತಾಮಣಿ’ ಲಕ್ಕಣ್ಣ–ದಂಡೇಶ, ಮೈಸೂರ ವಿಶ್ವವಿದ್ಯಾಲಯ ಪ್ರಕಟಣೆ
೪) ಶೂನ್ಯ ಸಂಪಾದನೆಗಳು